**12** ಎಂ.ಸಿ. ಅರುಣ್ ಕುಮಾರ್, ಮೈಸೂರು

ಇಲ್ಲೊಬ್ಬಳು ಕೆನ್ನೆಗೆ ಕೊಟ್‌ಬಿಡ್ತೀನಿ ಎನ್ನುತ್ತಾಳೆ; ಏನಿರಬಹುದು?



ಕೆನ್ನೆಗೆ ಎಂದ ಮೇಲೇ... ರೇಝರ್ರೇ ಇರಬೇಕು!

ಉದಯಶಂಕರರಾವ್, ದೊಡ್ಡಬಳ್ಳಾಪುರ

ಅಕ್ಷಯ ತದಿಗೆಯ ದಿನ ಪ್ರಶ್ನೆ ಕಳುಹಿಸುತ್ತಿದ್ದೇನೆ! ಬಹುಮಾನ ಬರಬಹುದೆ?

ಚಿನ್ನದಂತಹ ಉತ್ತರವಂತೂ ಖಾತ್ರಿ.

ರಜನಿ ಎಸ್, ಬೆಂಗಳೂರು

ಒರೆನೋಟಕ್ಕೂ, ವಾರೆನೋಟಕ್ಕೂ ಇರುವ ವ್ಯತಾಸವೇನು?

ಒರೆನೋಟ ಅಕ್ಕಸಾಲಿಗನಿಗೂ ಓರೆನೋಟ ಅಕ್ಕನಿಗೂ ಚೆಂದ ಎಂದ ಭಾವ!

ನೆ.ಸು. ಆನಂದ್, ಕತ್ತರಗುಪ್ಪೆ

ಮಾತೃಭಾಷೆ ಯಾವುದೆಂದು ಪ್ರಶ್ನಿಸುವ ಜನ ಪಿತೃಭಾಷೆಯ ಬಗ್ಗೆ ಮೌನವಹಿಸಲು ಕಾರಣವೇನು?



ಮೌನವೇ ಪಿತೃಭಾಷೆಯಲ್ಲವೇ!

ರವಿಚಂದ್ರ ಕೆಂಗಾರಿ, ಕೊಪ್ಪಳ

ಎಲ್ಲಾ ರಾಜಕಾರಣಿಗಳೂ ಮು.ಮಂ.ಸೀಟಿಗೇ ಗುದ್ದಾಡುವರಲ್ಲಾ...?

Chief ಮಿನಿಸ್ಟರ್ ಆದರೆ thief ಮಿನಿಸ್ಟರ್ ಆಗುವುದು ಸುಲಭವಂತೆ!

ಎಸ್.ನರೇಂದ್ರ ನಾಯಕ್, ಗಂಗೊಳ್ಳಿ

ಇತ್ತೀಚೆಗೆ ಬುದ್ಧಿವಂತರೆಲ್ಲಾ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರಲ್ಲಾ ಸಾರ್?

ಛೆ! ಪರಸ್ಪರ ಕೊಲೆ ಮಾಡಿಕೊಂಡರೆ ಕ್ರೈಮ್ ನ್ಯೂಸ್‌ಗಾದರೂ ಪ್ರಯೋಜನವಾಗುತ್ತಿತ್ತು.

ರವೀಂದ್ರನಾಥ ಶಿ ಯಡಹಳ್ಳಿ, ಬಾಗಲಕೋಟೆ

ಆನೆಗಳನ್ನು ನಿಯಂತ್ರಿಸಲು ಅಂಕುಶವಿದ್ದಂತೆ ಪ್ರೇಮಿಗಳನ್ನು ನಿಯಂತ್ರಿಸಲು ಏನಿದ್ದರೆ ಚೆನ್ನಾಗಿರುತ್ತದೆ ಗುರೂಜಿ?

ಬೆಳಕು, ಜನ!

ಖಲಂದರ್ ಅಝೀಝ್, ಬಜಪೆ

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ; ಕೆಟ್ಟ ಹೆಣ್ಣು?

ಅವಳಿಂದ ಕುಲವೇ ಹೊರಕ್ಕೆ!

ಸತೀಶ, ಡಿ.ಬಿ, ಕೋತಿತೋಪು

ಪ್ರೇಮಿಗಳು ಪ್ರೀತಿಯನ್ನು ಅರಿತಿರುತ್ತಾರೆಯೋ ಅಥವಾ ಪ್ರೀತಿಯೇ ಪ್ರೇಮಿಗಳನ್ನು ಅರಿತಿರುತ್ತದೆಯೋ?

ಪ್ರೀತಿಯೆಂಬ ಇಂಟರ್‌ನೆಟ್‌ನಲ್ಲಿ ಪ್ರೇಮಿಗಳು ಕೇವಲ ವೆಬ್‌ಸೈಟ್‌ಗಳಷ್ಟೆ!

ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ

ಕಳ್ಳರನ್ನು ನಂಬಿದರೂ ಕುಳ್ಳರನ್ನು ನಂಬಬಾರದು ಎಂಬುದು ಕುಳ್ಳರನ್ನು ಹೀಯಾಳಿಸಿದಂತಲ್ಲವೇ?

ಅದು ವಾಮನನ ಬಗ್ಗೆ ಬಲಿ ಹೇಳಿದ ಮಾತಂತೆ!

ಜಿ.ಆರ್.ಸುಬ್ರಮಣ್ಯ, ವಿಜಯನಗರ

ದ್ವಾಪರದ ರಾಸಲೀಲೆಗಿಂತ ಕಲಿಯುಗದ ಕಾಮಲೀಲೆ ಜೋರಾಗಿದೆಯಲ್ಲಾ?

ಹಾಗೇನಿಲ್ಲ. ಆಗ ನೇರ ಪ್ರಸಾರ, ಬ್ರೇಕಿಂಗ್ ನ್ಯೂಸ್‌ಗಳು ಇರಲಿಲ್ಲವಷ್ಟೆ.

ವಸಂತಾ ಆನಂದ್, ಬೆಂಗಳೂರು

ಪ್ರಶ್ನಾರ್ಥಿಗಳೆಲ್ಲಾ ಒಗ್ಗೂಡಿ ಪ್ರಶ್ನೆಗಳನ್ನೇ ಕೇಳದಿದ್ದರೆ ತಮ್ಮ ಗತಿಯೇನು ರಾಮ್ ರಾಮ್?

ಪ್ರಶ್ನೆಗಳನ್ನು ನಿಲ್ಲಿಸಿದ್ದೇಕೆ? ಎಂಬ ಪ್ರಶ್ನೆಗೇ ವರ್ಷಗಟ್ಟಲೆ ಉತ್ತರಿಸಿದರಾಯ್ತು!

ನಾಗರಾಜ ಬಣಕಾರ್, ಕೊಟ್ಟೂರು

ಮಾನಸಿಕ ರೋಗದ ಲಕ್ಷಣವೇನು?

ಸ್ವಂತ ಹೆಂಡತಿಯನ್ನೂ ಪ್ರೀತಿಸುವುದು!

ಮಹೇಂದ್ರಕುಮಾರ್, ಶೇಷಾದ್ರಿಪುರಂ

ಅಪ್ಪನ ಜೇಬಿಗೆ ಕೈ ಹಾಕಿದರೆ ಮಕ್ಕಳಿಗೆ ಪೆಟ್ಟು ಬೀಳುತ್ತದೆ; ಅದೇ ಗಂಡನ ಜೇಬಿಗೆ ಹೆಂಡತಿ ಕೈ ಹಾಕಿದರೆ?

ಜೇಬು ವ್ಯಾಕ್ಯೂಮ್ ಕ್ಲೀನರ್ ಹಾಕಿದಂತೆ ಖಾಲಿಯಾಗುತ್ತದೆ.

## ಬಹುಮಾನಿತ ಪ್ರಶ್ನೆ

ಎಸ್. ಗುರುಬಸಪ್ಪ, ಶಿವಮೊಗ್ಗ

ಹಿಂದೆ ಉಗ್ರದೇವರ ಭಕ್ತನಾಗಿದ್ದವನು ಈಗ ಸೌಮ್ಯದೇವರ ಭಕ್ತನಾಗಿದ್ದೇನೆ; ವಿಷಯ ತಿಳಿದರೆ ಉಗ್ರದೇವರು ತೊಂದರೆ ಕೊಡಬಹುದೆ?

ಬೇಗ ಹೈಕಮಾಂಡ್ ದೇವಿಯ ಭಕ್ತರಾಗಿಬಿಡಿ; ಆಗ ಯಾವ ದೇವನ ಭಯವೂ ಇರದು!

ಕೆ. ಹೊನ್ನಪ್ಪ, ಕ್ಯಾತಸಂದ್ರ

ಹಾಲಾಹಲಕ್ಕೂ, ಕೋಲಾಹಲಕ್ಕೂ ಏನು ವ್ಯತ್ಯಾಸ?

ಹಾಲು ಕುಡಿದರೆ ಹಾಲಾಹಲ, ಕೋಲಾ ಕುಡಿದರೆ ಕೋಲಾಹಲ.

ಕೀರ್ತಿವಿಜಯ್ ಜೈನ್, ಬೆಂಗಳೂರು

ಪ್ರೀತಿ ಹೃದಯದಲ್ಲಿ ಹುಟ್ಟಿ, ಫೇಲ್ ಆದಾಗ, ಮನಸ್ಸು ಕೆಡುವುದೇಕೆ?

ಪ್ರೀತಿ ಕರೆಂಟ್; ಮನಸ್ಸು ಟೀವಿ, ಹೃದಯ ರಿಮೋಟ್ ಕಂಟ್ರೋಲ್ ಆದ್ದರಿಂದ.

ಬಿ.ಪಿ.ನಾಗಲಿಂಗಮೂರ್ತಿ, ಬಸವನಗುಡಿ

ಕದ್ದ ಹೂವಿನಿಂದ ಪೂಜೆ ಮಾಡಿದರೆ ಪುಣ್ಯ ಲಭಿಸುವುದೇ?



ಲಭಿಸುವುದು – ಹೂವಿನ ಗಿಡ ಯಾರದೋ ಅವರಿಗೆ!

ಕೋರಾ ವಿಜಯಕುಮಾರ್, ನಾಗಣ್ಣನ ಪಾಳ್ಯ

ಇಲ್ಲೊಬ್ಬ ನಾನು ಸಂನ್ಯಾಸಿಯಾದರೂ ಆಗುತ್ತೇನೆ, ಆದರೆ ರಾಜಕಾರಣಿ ಆಗೋಲ್ಲ ಎನ್ನುತ್ತಿದ್ದಾನೆ; ಏಕೆ?

ಆಶ್ರಮದಲ್ಲಿದ್ದರೆ ರಾಜಿನಾಮೆ ನೀಡಬೇಕಿಲ್ಲ!

ಶ್ರೀಕಾಂತ ಗೋಡಖಿಂಡಿ, ದಾಂಡೇಲಿ

ಮೊಬೈಲ್ ಬಂದಮೇಲೆ ಮಾನವ ಬಹಳ ಸೋಮಾರಿಯಾಗಿದ್ದಾನಲ್ಲಾ?

ಹೌದೇ? ಕುಂಭಕರ್ಣನ ಕಾಲದಲ್ಲಿ ಮೊಬೈಲ್ ಇತ್ತೇನು?

■ ರಾಮ್